ದಿನಾಂಕ: 06.02.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 1 ನೇ ಪ್ರತಿವಾದಿಗಳ ಪರ ಶ್ರೀ ಜಿ ಕೆ ಎಂ ವಕೀಲರಿಂದಃ**

ನಾನು 2 ಅಥವಾ 3 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಸಾಕ್ಷಿ ನುಡಿಯಲು ಈ ನ್ಯಾಯಾಲಯದಿಂದ ಸಮನ್ಸ್ ಬಂದಿಲ್ಲ. ನನಗೆ ನ್ಯಾಯಾಲಯದಿಂದ ದಾಖಲೆಗಳನ್ನು ಹಾಜರು ಪಡಿಸಲು ಸಮನ್ಸ್ ಬಂದಿಲ್ಲ. ವಕೀಲರು ದಾಖಲೆ ಕೊಡಲು ಹೇಳಿದ್ದರಿಂದ ನಾನು ಕೊಟ್ಟಿರುತ್ತೇನೆ. ನಮ್ಮ ಕುಟುಂಬಕ್ಕೆ 6 ಪಹಣಿಗಳಿವೆ. ಸರ್ವೆ ನಂ.280 ರಲ್ಲಿ 7 ಎಕರೆ, ಸರ್ವೆ ನಂ. 97 ರಲ್ಲಿ 4 ಎಕರೆ, ಸರ್ವೆ ನಂ.260 ರಲ್ಲಿ 4 ಎಕರೆ , ಸರ್ವೆ ನಂ.75/4 ರಲ್ಲಿ 3 ಎಕರೆ 273/2 ರಲ್ಲಿ 3 ಎಕರೆ ಜಮೀನು ಇದೆ. ಸದರಿ ಆಸ್ತಿಗಳ ಖಾತೆ ನಮ್ಮ ಅಣ್ಣ ತಮ್ಮಂದಿರ ಜಂಟಿಯಲ್ಲಿ ಇದೆ. ನಮ್ಮ ಕುಟುಂಬಕ್ಕೆ ಯಾವುದೇ ಪಾಲು ಪಾರಿಖತ್ ಆಗಿಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ಜಮೀನು ಕೊಂಡಿರುವ ಬಗ್ಗೆ ದಾಖಲೆ ಇಲ್ಲ. ನಮ್ಮ ಕುಟುಂಬದವರು ಬೇರೆಯವರಿಗೆ ಆಸ್ತಿ ಮಾರಾಟ ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ವ್ಯವಹಾರಗಳು ಆಗಿಲ್ಲ.

ನಮ್ಮ ಕುಟುಂಬದಲ್ಲಿ ನನ್ನ ತಂದೆ ಸಹಿ ಇದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಬ್ಯಾಂಕ್ ನಲ್ಲಿ ಖಾತೆ ಮಾಡಿಸಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾವು 4 ಜನ ಅಣ್ಣ ತಮ್ಮಂದಿರು. ನಾವು 4 ಜನ ವಿದ್ಯಾಭ್ಯಾಸ ಮಾಡಿರುತ್ತೇವೆ. 4 ಜನರನ್ನು ನಮ್ಮ ತಂದೆಯೇ ಶಾಲೆಗೆ ದಾಖಲಿಸಿರುತ್ತಾರೆ. ನನ್ನ ತಂದೆ ಶಾಲಾ ದಾಖಲೆಗಳಿಗೆ ಸಹಿ ಮಾಡಿ ಸೇರಿಸಿರುತ್ತಾರೆ. ಸದರಿ ಶಾಲಾ ದಾಖಲೆಗಳಲ್ಲಿ ನಿಮ್ಮ ತಂದೆಯ ಸಹಿ ಇರುವ ದಾಖಲೆಗಳನ್ನು ತಂದು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ತಂದೆ ಶಾಲೆಗೆ ಸೇರಿಸಿದ್ದರು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ 2 ನೇ ತರಗತಿ ಓದಿದ್ದರು. ನನ್ನ ತಂದೆ ಸಹಿ ಮಾಡುವಾಗ ಮೊದಲು ಇಂಗ್ಲಿಷ್ ನಲ್ಲಿ ಟಿ ಎಂದು ಬರೆದು ನಂತರ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು. ನನ್ನ ತಂದೆಯಾವುದೇ

ಬ್ಯಾಂಕ್ ನಲ್ಲಿ ಸಾಲ ಪಡೆದಿಲ್ಲ. ನನ್ನ ತಂದೆ ಯಾವುದೇ ಪೆಂಷನ್ ಪಡೆದುಕೊಳ್ಳುತ್ತಿರಲಿಲ್ಲ. ನಿಡಿ-22, 25 ನ್ನು ಹೊರತು ಪಡಿಸಿ ನನ್ನ ತಂದೆಯ ಸಹಿ ಇದೆ ಎಂದು ತೋರಿಸುವ ಬೇರೆ ದಾಖಲೆಗಳು ಇಲ್ಲ. ನನ್ನ ತಂದೆ ಎಷ್ಟು ಪತ್ರಗಳಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನಿಡಿ-22(ಎ) ರಲ್ಲಿ ಟಿ ದಾಸಪ್ಪ ಎಂದು ಮಾತ್ರ ಇದೆ ತಂದೆ ಹೆಸರು ಬರೆದಿಲ್ಲ ಎಂದರೆ ನಿಜ. ನಿಡಿ-22 ರಲ್ಲಿ ಏನು ಬರೆಯಲಾಗಿದೆ ಎಂದು ನಾನು ವಿಚಾರಿಸಿಲ್ಲ. ನಿಡಿ-22 ಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-25 ನ್ನು ಪಕ್ಷಗಾರರು ಹಾಜರು ಪಡಿಸಿರುತ್ತಾರೆ. ನಿಡಿ-25(ಎ) ನನ್ನ ತಂದೆ ಹೆಸರಿಗೆ ಇಲ್ಲ ಎಂದರೆ ನಿಜ. ನಾನು ಟಿ. ದಾಸಪ್ಪನ ಮಗನೇ ಅಲ್ಲ ಎಂದರೆ ಸರಿಯಲ್ಲ. ಟಿ. ದಾಸಪ್ಪನಿಗೂ ನನಗೂ ಯಾವುದೇ ಸಂಬಧವಿಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಮತ್ತು ನಾನು ಟಿ. ದಾಸಪ್ಪನ ಮಗನಾಗದೇ ಇದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು